# ಪ್ರಶ್ನೆ:

# “ಮರಣಾನಂತರ ಜೀವನ ಇರುವುದೋ?”

## ಉತ್ತರ:

ಕೊನೆಗೆ ನಾವು ಸಾಯತಕ್ಕದ್ದು ಎಂದು ನಾವು ಎಲ್ಲರೂ ಬಲ್ಲವರಾಗಿದ್ದೇವೆ. ಪ್ರಶ್ನೆಯು ಹೀಗಿರುತ್ತದೆ: ಆಗ ಏನು ಸಂಬವಿಸುತ್ತದೆ? ಇಲ್ಲವೇ ಯೋಬನು ಕೇಳಿದಂತೆ, “ಒಬ್ಬ ಮನುಷ್ಯನು ಸತ್ತು ಹೋದರೆ ಅವನು ಪುನಃ ಜೀವಿಸುವನೋ? ...” (ಯೋಬ 14:14). ೮೦ರ ವಯಸ್ಸಿನಲ್ಲಿದ್ದ ಒಬ್ಬ ಮನುಷ್ಯನು ನನ್ನ ಒಬ್ಬ ಸ್ನೇಹಿ ತನಿಗೆ ತಾನು ಶವಸಂಸ್ಕಾರದ ಗುತ್ತಿಗೆದಾರನಿಗಾಗಿ ಕಾಯುತ್ತಿರುವೆನೆಂದು ಹೇಳಿದನು. “ಆದರೆ ಆಗ ನೀನು ಎಲ್ಲಿ ಇರುವಿ ಎಂಬುದನ್ನು ತಿಳಿದಿರುವಿಯೋ?” ಎಂದು ನನ್ನ ಸ್ನೇಹಿತ ಕೇಳಿದನು, “ಹೌದು,” “ನಾನು ಭೂಮಿಯೊಳಗೆ ಆರು ಅಡಿ ಕೆಳಗಿರುವೆನು ಅಥವಾ ಚಿತಾಗಾರದಲ್ಲಿ ಇರುವೆನು” ಎಂದು ಅವನು ಉತ್ತರ ಕೊಟ್ಟನು. ಅವನು ಸರಿ ಯಾಗಿರುವನೋ? ಮರಣಾನಂತರ ಇರುವುದು ಅಷ್ಟೆಯೋ?

ಮರಣಾನಂತರವು ಜೀವವಿರುವುದೆಂದು ಜನರು ಯಾವಾಗಲೂ ನಿರೀಕ್ಷಿಸಿದ್ದಾರೆ. ಹತ್ತೊಂಬತ್ತನೆಯ ಶತಮಾನದ ಪ್ರಸಿದ್ಧ ನಾಸ್ತಿಕ, ರೊಬರ್ಟ್ ಇಂಗರ್‌ಸೋಲ್ ಸಹ ಜೀವವು ಮರಣವನ್ನು ದಾಟಿ ಹೋಗುವುದೆಂದು ನಿರೀಕ್ಷಿಸಿದ್ದನು. ತನ್ನ ಸಹೋದರನ ಸಮಾಧಿಯ ಬಳಿಯಲ್ಲಿಯ ಪ್ರಶಂಸೆಯಲ್ಲಿ ಹೀಗೆ ಹೇಳಿದನು,

> ... ಮರಣದ ರಾತ್ರಿಯಲ್ಲಿ ನಿರೀಕ್ಷೆಯು ಒಂದು ನಕ್ಷತ್ರವನ್ನು ನೋಡುವುದು ಮತ್ತು ಕೇಳುತ್ತಿರುವ ಪ್ರೀತಿಯು ರೆಕ್ಕೆಗಳ ಬಡಿತವನ್ನು ಕೇಳಿಸಿಕೊಳ್ಳುವುದು. ಇಲ್ಲಿ ಮಲಗುವವನು, ಸಾಯುವಾಗ, ಆರೋಗ್ಯದ ಹಿಂದಿರುವಿಕೆಗಾಗಿ ಮರಣವು ಬರುತ್ತಿರುವದನ್ನು ತಪ್ಪಾಗಿ ತಿಳಿದು, ತನ್ನ ಕೊನೆಯ ಉಸಿರು ಉಸುರಿದನು, “ಈಗ ನಾನು ಚೆನ್ನಾಗಿದ್ದೇನೆ.” ಸಂಶಯಗಳಿದ್ದರೂ ತತ್ವಗಳಿದ್ದರೂ ಕಣ್ಣೀ ರಿದ್ದರೂ ಭಯಗಳು ಇದ್ದರೂ, ಈ ಪ್ರೀತಿಯ ಪದಗಳು ಸತ್ತುಹೋದ ಅಗಣಿತರಾದವರೆಲ್ಲರಿಗೂ ಸತ್ಯವಾದವುಗಳಾಗಿವೆ.[1]

ಇಂಗರ್‌ಸೋಲನು ಪರಲೋಕದಲ್ಲಿ ನಂಬಿಕೆಯಿಡಲು ಬಯಸಿದ್ದನು ಮರಣಾ ನಂತರದ ಜೀವದಲ್ಲಿ ನಾವೆಲ್ಲರೂ ನಂಬಲು ಬಯಸುತ್ತೇವೆ. ಆದರೆ ನಾವು ಹಾಗೆ ಮಾಡಬಹುದೋ?

ಬೈಬಲು ತಪ್ಪಿಲ್ಲದ ಒಪ್ಪಿಗೆಯೊಂದಿಗೆ ಆ ಪ್ರಶ್ನೆಗೆ ಉತ್ತರಕೊಡುತ್ತದೆ. ಆದರೆ ಅದು ಬೈಬಲಿನ ಬೋಧನೆಯನ್ನು ತೀರಿಸಿಬಿಡುವದಿಲ್ಲ. *ಮರಣಾನಂತರ ನಿನಗೆ ಏನು ಸಂಭವಿಸುವುದು ಎಂಬುದರ ಬಗ್ಗೆ ಬೈಬಲು ಮತ್ತೇನನ್ನು ಬೋಧಿಸುತ್ತದೆ?*

ಆ ಪ್ರಶ್ನೆಗೆ ಉತ್ತರವನ್ನು ಸಾಧ್ಯವಾದಷ್ಟು ಸರಳವಾದದ್ದಾನ್ನಾಗಿ ಮಾಡಲು ಜೀವನದಲ್ಲಿ, ಮರಣದಲ್ಲಿ ಮತ್ತು ಮರಣಾನಂತರದ ಜ್ಯೋ ಬ್ರೌನ್ ಅವನ ಕಥೆಯನ್ನು ಹೇಳೋಣ. ನಾವು ಇದನ್ನು ಮಾಡುವಂತೆ, ಜ್ಯೋ ಬ್ರೌನನು ಪ್ರತಿಯೊಬ್ಬ ವ್ಯಕ್ತಿಯು ಪ್ರತಿನಿಧಿಯಾಗಿದ್ದಾನೆಂಬುದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳೋಣ.

## ಜೀವನದಲ್ಲಿ ಜ್ಯೋ ಬ್ರೌನ್

"ಮನುಷ್ಯನು ಎಷ್ಟು ಮಾತ್ರದವನು, ಅವನನ್ನು ನೀನು ಯಾಕೆ ನೆನಸಬೇಕು? ..." (ಕೀರ್ತನೆ 8:4) ಎಂದು ಕೀರ್ತನೆಗಾರನು ಕೇಳುತ್ತಾನೆ. ಜೀವನದಲ್ಲಿ, ಜ್ಯೋ ಬ್ರೌನ್ ಏನಾಗಿರುವನು?

*ಅವನಿಗೆ ಆತ್ಮವಿರುವುದು ಇಲ್ಲವೇ ಅವನು ಆತ್ಮನಾಗಿದ್ದಾನೆ.* ಇದು ಜ್ಯೋ ಬ್ರೌನ್‌ನ ಬಗ್ಗೆ ಅತೀ ಮೂಲವಾದ ಸಂಗತಿಯಾಗಿದೆ, ಇಲ್ಲವೇ ಯಾವುದೇ ಮಾನವ ಜೀವಿಯ ಬಗ್ಗೆ ಆಗಿದೆ. ಅವನು, ದೇವರ ಸ್ವರೂಪದಲ್ಲಿ ಉಂಟುಮಾಡಲ್ಪಟ್ಟಿರುವನಲ್ಲವೇ - ಮತ್ತು ದೇವರು ಆತ್ಮಸ್ವರೂಪನಾಗಿದ್ದನೆ (ಯೋಹಾನ 4:24). ಆದುದರಿಂದ, ಮನುಷ್ಯನು *ದೇಹಕ್ಕಿಂತ ಹೆಚ್ಚಾಗಿದ್ದಾನೆ;* ಅವನು ಎಲ್ಲಕ್ಕಿಂತ ಹೆಚ್ಚಾಗಿ, ಆತ್ಮಿಕ ಜೀವಿಯಾಗಿದ್ದಾನೆ. ಮನುಷ್ಯನು "ಆಂತರಿಕ ಮನುಷ್ಯ" ಮತ್ತು "ಬಾಹ್ಯ ಮನುಷ್ಯ" ಎರಡರಿಂದಲೂ ರಚಿಸಲ್ಪಟ್ಟವನೆಂಬಂತೆ ಪೌಲನು ಮಾತಾಡುತ್ತಾನೆ (2 ಕೊರಿಂಥ 4:16; ಹೋಲಿಸು ಪ್ರಸಂಗಿ 12:7).

*ಅವನಿಗೆ ಪ್ರಾಕೃತಿಕ ದೇಹವೂ ಇರುವುದು.* "ಆದುದರಿಂದ ಸಹೋದರರೇ, ದೇವರ ಕನಿಕರವನ್ನು ನಿಮ್ಮ ನೆನಪಿಗೆ ತಂದು ನಿಮ್ಮನ್ನು ಬೇಡಿಕೊಳ್ಳುವದೇನೆಂದರೆ - ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಕೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸಿರಿ ..." (ರೋಮಾಪುರ 12:1) ಎಂದು ಪೌಲನು ಬರೆದನು. "ನೀವು" ಮತ್ತು "ನಿಮ್ಮ ದೇಹಗಳು" ಇವುಗಳ ಮಧ್ಯದಲ್ಲಿ ಅವನು ಭಿನ್ನತೆ ಮಾಡುತ್ತಾನೆ. ರೋಮಿನಲ್ಲಿಯ ಕ್ರೈಸ್ತರ ತಿರುಳು ಅವರ ದೇಹಗಳಲ್ಲಿ ಕಂಡುಕೊಳ್ಳಲಿಕ್ಕಾಗುವಂಥದ್ದಲ್ಲ; "ಅವರು" ತಮ್ಮ ದೇಹಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳಬೇಕು, ಆದರೆ "ಅವರು" ತಮ್ಮ ದೇಹಗಳೊಂದಿಗೆ ಸಮಾನವಾಗಿ ಮಾಡಿಕೊಳ್ಳಬಾರದು.

*ಅವನಿಗೆ ವ್ಯಕ್ತಿತ್ವವೂ ಸಹ ಇರುವುದು.* ಒಬ್ಬ ವ್ಯಕ್ತಿಯ ಮಾನಸಿಕ (ಅವನ ದೈಹಿಕ ರಚನೆಗೆ ವಿರುದ್ಧವಾಗಿ) ರಚನೆಗಾಗಿ ನಾವು "ವ್ಯಕ್ತಿತ್ವ" ಎಂಬ ಪದವನ್ನು ಉಪಯೋಗಿಸುತ್ತಿದ್ದೇವೆ: ಜ್ಯೋ ಬ್ರೌನನು ಸ್ನೇಹವುಳ್ಳವನಾಗಲೀ ಇಲ್ಲವೇ ಕಹಿಯುಳ್ಳವನಾಗಿಯಾಗಲೀ, ದೀನನಾಗಲೀ ಇಲ್ಲವೇ ಹಟಮಾರೀಯಾಗಲೀ, ಇಲ್ಲವೇ ದಯೆಯುಳ್ಳವನಾಗಲೀ ಇಲ್ಲವೇ ಒರಟನಾಗಿಯಾಗಲೀ ಇರುವನು. ಅವನ ಎಲ್ಲಾ ಅನುಭವಗಳೂ, ಚಟಗಳೂ, ಮತ್ತು ಗುಣಲಕ್ಷಣಗಳೂ ಅವನು ಏನಾಗಿರುವನೋ ಅದನ್ನು ಮಾಡಿದೆ. ಆ ಗುಣಲಕ್ಷಣಗಳು ಇಲ್ಲದೇ, ಅವನು ತಾನೇ ಆಗಿರಲಾರನು.

ಜ್ಯೋ ಬ್ರೌನನಿಗೆ ದೇವರ ಮತ್ತು ತಾನು ಜೀವಿಸಿರುವವರೆಗೆ ತನ್ನ ಜೊತೆ ಮಾನವನ ಸೇವೆ ಮಾಡುವ ಜವಾಬ್ದಾರಿಕೆಯುಳ್ಳವನಾಗಿದ್ದಾನೆ. ಅವನು ಹಾಗೆ ಮಾಡುವನೋ? ದೇವರು ಮತ್ತು ಅವನು ಮಾತ್ರವೇ ನಿಶ್ಚಿತವಾಗಿ ತಿಳಿದಿರುವರು.

## ಮರಣದಲ್ಲಿ ಜ್ಯೋ ಬ್ರೌನ್

ಮರಣದಲ್ಲಿ ಜ್ಯೋ ಬ್ರೌನನಿಗೆ ಏನು ಸಂಭವಿಸುವುದು? ಮರಣವು ಬೇರ್ಪಡಿಸುವಿಕೆಯಾಗಿದೆ. "ಆತ್ಮವಿಲ್ಲದ ದೇಹವು ಸತ್ತದ್ದಾಗಿರುವ ಪ್ರಕಾರವೇ ಕ್ರಿಯೆಗಳಿಲ್ಲದ

ನಂಬಿಕೆಯೂ ಸತ್ತದ್ದೇ" ಎಂದು ಯಾಕೋಬ 2:26 ಹೇಳುತ್ತದೆ. ಆತ್ಮವು ದೇಹವನ್ನು ಬಿಡುವಾಗ, ದೇಹ ಮತ್ತು ಆತ್ಮ ಬೇರ್ಪಡಿಸುತ್ತವೆ, ಆಗ ಮರಣ ಸಂಭವಿಸುವುದು. ಮರಣವು ಒಬ್ಬನು ಬಟ್ಟೆಯನ್ನು ಬದಲಾಯಿಸುವಂತೆ, "ನಮ್ಮ ಮನೆಯಾಗಿರುವ ಭೂಲೋಕದ ಗುಡಾರವನ್ನು" ತೆಗೆದು ಹಾಕುವಂತೆ, "ಪರಲೋಕದ ನಮ್ಮ ನಿವಾಸ ಸ್ಥಾನವನ್ನು ಧರಿಸಿಕೊಳ್ಳುವಂತೆ" (2 ಕೊರಿಂಥ 5:1, 2; ಹೋಲಿಸು ವಚನಗಳು 4, 8) ವಿವರಿಸಲ್ಪಟ್ಟಿದೆ.

ನೀನು ಒಂದು ಕೈಯನ್ನು ಕಳೆದುಕೊಂಡರೆ ನೀನು ಇನ್ನೂ ನೀನೇ ಆಗಿರುವಿ. ನೀನು ನಿನ್ನ ಎರಡೂ ತೋಳುಗಳನ್ನೂ ಎರಡೂ ಕಾಲುಗಳನ್ನೂ ಕಳೆದುಕೊಂಡರೂ ನೀನು ಇನ್ನೂ ನೀನೆ ಆಗಿರುವಿ. ನಿನ್ನ ತೋಳುಗಳನ್ನೂ, ನಿನ್ನ ಕಾಲುಗಳನ್ನೂ ಅಷ್ಟೇ ಅಲ್ಲ ಇಡೀ ದೇಹವನ್ನೇ ಕಳೆದುಕೊಳ್ಳುವಂತೆ ಮರಣವನ್ನು ಚಿತ್ರಿಸಿಕೋ. ಒಂದು ಕೈಯನ್ನು ಕಳೆದು ಕೊಳ್ಳುವಾಗ "ನೀನು" ಆಗಿರುವ ವ್ಯಕ್ತಿಯು ಉಳಿದು ಕೊಳ್ಳುವಂತೆ ಹಾಗೆಯೇ "ನೀನು" ಆಗಿರುವಂಥ ವ್ಯಕ್ತಿಯು ನಿನ್ನ ದೇಹವನ್ನು ಕಳೆದುಕೊಳ್ಳುವಾಗ ಉಳಿದುಕೊಳ್ಳುವುದು, ಹಾಗಿರುವಂತೆಯೇ, ಜ್ಯೋ ಬ್ರೌನ್ ಸಾಯುವಾಗ, ಅವನ ದೇಹವು "ತೆಗೆಯಲ್ಪಡುವುದು" ಆದರೇ ಅವನು ಇನ್ನೂ ಅಸ್ತಿತ್ವದಲ್ಲಿರಲು ಮುಂದುವರಿಯುವನು.

## ಜ್ಯೋ ಬ್ರೌನ್ ಪಾತಾಳ ಲೋಕದಲ್ಲಿ

ಮರಣಾನಂತರ ಜ್ಯೋ ಬ್ರೌನನಿಗೆ ಕೂಡಲೇ ಏನು ಸಂಭವಿಸುತ್ತದೆ? ಐಶ್ವರ್ಯವಂತ ಮತ್ತು ಲಾಜನರ ಕಥೆಯಲ್ಲಿ ಐಶ್ವರ್ಯವಂತನು "ಪ್ರತಿದಿನವೂ ವೈಭವದೊಡನೆ ಸುಖ ಸಂತೋಷಪಡುತ್ತಿದ್ದನು," ಭಿಕ್ಷಗಾರ ಲಾಜರನು ಹಸಿವೆಯಿಂದ ಇದ್ದವನೂ ರೋಗಿಯೂ ಬಡವನೂ ಆಗಿದ್ದನು. ಲೂಕ 16:22-31 ಹೀಗೆ ಹೇಳುತ್ತದೆ,

> "ಹೀಗಿರುವಲ್ಲಿ ಸ್ವಲ್ಪ ಕಾಲದ ಮೇಲೆ ಭಿಕ್ಷಗಾರನು ಸತ್ತನು; ದೇವದೂತರು ಅವನನ್ನು ತೆಗೆದುಕೊಂಡು ಹೋಗಿ ಅಬ್ರಹಾಮನ ಎದೆಗೆ ಒರಗಿಸಿದರು. ಆ ಐಶ್ವರ್ಯವಂತನು ಸಹ ಸತ್ತನು; ಅವನಿಗೆ ಉತ್ತರ ಕ್ರಿಯೆಗಳು ಆದವು. ಅವನು ಪಾತಾಳದೊಳಗೆ ಯಾತನೆ ಪಡುತ್ತಾ ಇರುವಲ್ಲಿ ಕಣ್ಣೆತ್ತಿ ದೂರದಿಂದ ಅಬ್ರಹಾಮನನ್ನೂ ಇವನ ಎದೆಗೆ ಒರಗಿಕೊಂಡಿದ್ದ ಲಾಜರನನ್ನೂ ನೋಡಿ - ತಂದೆಯೇ, ಅಬ್ರಹಾಮನೇ, ನನ್ನ ಮೇಲೆ ದಯವಿಟ್ಟು ಲಾಜರನನ್ನು ಕಳುಹಿಸು; ಅವನು ತನ್ನ ತುದಿ ಬೆರಳನ್ನು ನೀರಿನಲ್ಲಿ ಅದ್ದಿ ನನ್ನ ನಾಲಿಗೆಯನ್ನು ತಣ್ಣಗೆ ಮಾಡಲಿ; ಈ ಉರಿಯಲ್ಲಿ ಸಂಕಟಪಡುತ್ತೇನೆ ಎಂದು ಕೂಗಿ ಹೇಳಿದನು. ಆದರೆ ಅಬ್ರಹಾಮನು ಕಂದಾ, ನೀನು ಆಶಿಸಿದ ಸುಖವನ್ನು ನಿನ್ನ ಜೀವಮಾನದಲ್ಲಿ ಹೊಂದಿದಿ; ಹಾಗೆಯೇ ಲಾಜರನು ಕಷ್ಟವನ್ನು ಹೊಂದಿದನು ಎಂಬುದನ್ನು ನೆನಪಿಗೆ ತಂದುಕೋ. ಈಗಲಾದರೋ ಇಲ್ಲಿ ಇವನಿಗೆ ಸಮಾಧಾನ, ಆದರೆ ನಿನಗೆ ಸಂಕಟ. ಇದು ಮಾತ್ರವಲ್ಲದೆ ನಮಗೂ ನಿಮಗೂ ನಡುವೆ ದೊಡ್ಡದೊಂದು ಡೊಂಗರ ಸ್ಥಾಪಿಸಿಯದೆ; ಆದಕಾರಣ ಈ ಕಡೆಯಿಂದ ನಿಮ್ಮ ಬಳಿಗೆ ಹೋಗಬೇಕೆಂದಿರುವವರು ಹೋಗಲಾರರು; ಮತ್ತು ಆ ಕಡೆಯಿಂದ ನಮ್ಮ ಬಳಿಗೆ ಯಾರೂ ದಾಟುವದಕ್ಕಾಗದು ಅಂದನು. ಆಗ ಅವನು - ಹಾಗಾದರೆ ಲಾಜರನನ್ನು ನನ್ನ ತಂದೆಯ ಮನೆಗೆ ಕಳುಹಿಸಬೇಕೆಂದು ನಿನ್ನನ್ನು ಬೇಡಿಕೊಳ್ಳುತ್ತೇನೆ. ನನಗೆ ಐದು ಮಂದಿ ಅಣ್ಣತಮ್ಮಂದಿರಿದ್ದಾರೆ; ಅವರು ಸಹ ಈ ಯಾತನೆಯ ಸ್ಥಳಕ್ಕೆ ಬಂದಾರು; ಬಾರದಂತೆ - ಅವನು ತಾನು ಕಂಡದ್ದನ್ನು ಅವರಿಗೆ ಚೆನ್ನಾಗಿ ಹೇಳಲಿ ಅಂದನು. ಆದರೆ ಅಬ್ರಹಾಮನು - ಮೋಶೆಯ ಧರ್ಮಶಾಸ್ತ್ರವೂ ಪ್ರವಾದಿಗಳ ಗ್ರಂಥಗಳೂ ಅವರಲ್ಲಿ ಅವೆ; ಅವುಗಳನ್ನು ಕೇಳಲಿ

> ಅನ್ನಲು ಅವನು - ತಂದೆಯೇ, ಅಬ್ರಹಾಮನೇ, ಹಾಗಲ್ಲ; ಸತ್ತವರ ಕಡೆಯಿಂದ ಒಬ್ಬನು ಅವರ ಬಳಿಗೇ ಹೋದರೆ ಅವರು ದೇವರ ಕಡೆಗೆ ತಿರಿಗಿಕೊಳ್ಳುವರು ಅಂದನು. ಅಬ್ರಹಾಮನು ಅವನಿಗೆ - ಅವರು ಮೋಶೆಯ ಮಾತನ್ನೂ ಪ್ರವಾದಿಗಳ ಮಾತನ್ನೂ ಕೇಳದಿದ್ದರೆ ಸತ್ತು ಹೋಗಿದ್ದವನೊಬ್ಬನು ಜೀವಿತನಾಗಿ ಎದ್ದರೂ ಅವರು ಒಪ್ಪುವದಿಲ್ಲ ಎಂದು ಹೇಳಿದನು."

*ಇದರಿಂದ ಮೊದಲನೆಯದಾಗಿ ನಾವು, ಮರಣಾನಂತರ ಒಬ್ಬ ವ್ಯಕ್ತಿ ಏನಾಗಿರುತ್ತಾನೆಂಬುದನ್ನು ನಾವು ಕಲಿಯಬಹುದು.*

*ಅವನು ಇನ್ನೂ ಒಂದು ಆತ್ಮನಾಗಿರುತ್ತಾನೆ.* ಲಾಜರ ಮತ್ತು ಐಶ್ವರ್ಯವಂತನು ತಮ್ಮ ದೇಹಗಳನ್ನು ಹಿಂದೆ ಬಿಟ್ಟು ಹೋದರು, ಆದರೆ ಅವರು ಇನ್ನೂ ಆತ್ಮಿಕ ರೂಪದಲ್ಲಿ ಅಸ್ತಿತ್ವವದಲ್ಲಿದ್ದರು.

ಮರಣಾನಂತರ, ಒಬ್ಬ ವ್ಯಕ್ತಿಗೆ ಒಂದು ಆತ್ಮಿಕ ದೇಹವಿರುತ್ತದೆ ಅಥವಾ *ಆತ್ಮಿಕ ದೇಹವನ್ನು* ಹೊಂದಿಕೊಳ್ಳುತ್ತಾನೆ. ನಾವು ಸಾಯುವಾಗ ಬಟ್ಟೆ ತೆಗೆಯಲ್ಪಟ್ಟವರಾಗುವದಿಲ್ಲ, ಯಾಕಂದರೆ ಪರಲೋಕದಿಂದ ದೊರಕುವ ನಮ್ಮ ನಿವಾಸವನ್ನು ಧರಿಸಿಕೊಳ್ಳುವೆವು ಎಂದು ಪೌಲನ ಹೇಳುತ್ತಾನೆ (2 ಕೊರಿಂಥ 5:2-4). "ಸತ್ತವರು ಹೇಗೆ ಎಬ್ಬಿಸಲ್ಪಡುತ್ತಾರೆ ಎಂಥ ದೇಹದಿಂದ ಬರುತ್ತಾರೆ?" (1 ಕೊರಿಂಥ 15:35) ಎಂಬ ಪ್ರಶ್ನೆಗಳಿಗೆ ಅವನು ಉತ್ತರ ಕೊಡುವಾಗ ಇದೇ ವಿಷಯವನ್ನು ತೋರಿಸುತ್ತಾನೆ. "ಪ್ರಕೃತ ದೇಹವಾಗಿ ಬಿತ್ತಲ್ಪಡುತ್ತದೆ, ಆತ್ಮಿಕ ದೇಹವಾಗಿ ಎದ್ದು ಬರುವದು ..." (1 ಕೊರಿಂಥ 15:44) ಎಂದು ಅವನು ಹೇಳುತ್ತಾನೆ. ಆತ್ಮಿಕ ದೇಹಗಳ ಅವಶ್ಯಕತೆ ನಮಗೆ ಯಾಕೆ ಇದೆ? ಯಾಕಂದರೆ "ಮಾಂಸ ರಕ್ತಗಳು ದೇವರ ರಾಜ್ಯಕ್ಕೆ ಬಾಧ್ಯವಾಗಲಾರದು ..." ( 1 ಕೊರಿಂಥ 15:50). ಅದರಂತೆಯೇ, ಕ್ರಿಸ್ತನು ಹಿಂದಿರುಗಿ ಬರುವಾಗ ಜೀವದಿಂದ ಇರುವವರು "ಮಾರ್ಪಡುವರು" (1 ಕೊರಿಂಥ 15:51) ಯಾಕಂದೆರೆ "ಲಯವಾಗುವ ಈ ದೇಹವು ನಿರ್ಲಯತ್ವವನ್ನು ಧರಿಸಿಕೊಳ್ಳುವುದೂ ಮರಣಾಧೀನವಾಗಿರುವ ಈ ದೇಹವು ಅಮರತ್ವವನ್ನು ಧರಿಸಿಕೊಳ್ಳುವುದೂ ಅವಶ್ಯ" (1 ಕೊರಿಂಥ 15:53). ಆದುದರಿಂದ ಸತ್ತು ಹೋದ ಪ್ರತಿಯೊಬ್ಬರಿಗೂ ಆತ್ಮಿಕ ದೇಹವಿರುವುದು.

ಒಬ್ಬ ವ್ಯಕ್ತಿಗೆ ಅವನ ಮೊದಲಿನ *ವ್ಯಕ್ತಿತ್ವವಿರುವುದು.* ಐಶ್ವರ್ಯವಂತ ಮತ್ತು ಲಾಜರ ತಮ್ಮ ವ್ಯಕ್ತಿತ್ವ ಉಳಿಸಿಕೊಂಡಿದ್ದರು. ಮರಣಾನಂತರ ಒಬ್ಬ ವ್ಯಕ್ತಿಯು ಯಾವುದೂ ಇಲ್ಲದ್ದರ ರೂಪವಿಲ್ಲದ ಮುದ್ದೆಯಾಗಲೀ ಇಲ್ಲವೇ ಅಸ್ಪಷ್ಟವಾದ ಆತ್ಮವಾಗಲೀ ಆಗಿರುವದಿಲ್ಲ. ಅವನಿಗೆ ಸ್ಮರಣೆ, ಅರುಹು, ಯೋಚಿಸಲು ಸಾಮರ್ಥ್ಯ, ವಿವೇಚನೆ, ಭಾವನೆ ಮತ್ತು ಹಿಂಸಿಸಲ್ಪಡಲು ಸಾಮರ್ಥ್ಯ ಇರುವುದು. ನಾವು ಒಂದು ವ್ಯಕ್ತಿಯಾಗಿ ಸತ್ತು ಹೋಗಿ ಇನ್ನೊಂದು ವ್ಯಕ್ತಿಯಾಗಿ ಎಚ್ಚರಗೊಳ್ಳುವುದಿಲ್ಲ. ಮರಣಾನಂತರ, ಇಂದು ನಾವು ಏನಾಗಿರುವೆವೋ ಮತ್ತು ಯಾರಾಗಿರುತ್ತೇವೆಯೋ ಇನ್ನೂ ಅದೇ ಆಗಿರುವೆವು.

*ಈ ಕಥೆಯಿಂದ, ಮರಣಾನಂತರ ಬಬ್ಬ ವ್ಯಕ್ತಿಯು ಎಲ್ಲಿಗೆ ಹೋಗುವನು ಎಂಬುದನ್ನು ಕಲಿತುಕೊಳ್ಳುವೆವು.* ಈ ಕಥೆಯ ನ್ಯಾಯತೀರ್ವಿಕೆಯ ದಿನದ ನಂತರದ ಸಮಯದ ಬಗ್ಗೆ ಮಾತಾಡುವದಿಲ್ಲ, ಯಾಕಂದರೆ ಹಿಂದೆ ಭೂಲೋಕದಲ್ಲಿ ಜೀವನವು ಇನ್ನೂ ಮುಂದುವರಿಯುತ್ತಅದೆ. ಇನ್ನೂ ಜೀವದಿಂದ ಇದ್ದ ಐಶ್ವರ್ಯವಂತನ ಐದು ಜನ ಸಹೋದರರು ಇರುವರು. ಆದರೆ ನ್ಯಾಯತೀರ್ವಿಕೆಯ ನಂತರ ಭೂಲೋಕದಲ್ಲಿ ಇನ್ನೂ ಜೀವಿಸುವವರು ಯಾರೂ ಇರುವದಿಲ್ಲ. ಯಾಕಂದರೆ ಕ್ರಿಸ್ತನು ಹಿಂದಿರಿಗಿ ಬರುವಾಗ ಭೂಮಿಯು ಸುಟ್ಟುಹೋಗುವುದು (2 ಪೇತ್ರ 3:10). ಮರಣದನಂತರ

ಜನರು ಎಲ್ಲಿಗೆ ಹೋಗುವರು ಎಂಬುದರ ಬಗ್ಗೆ ನಾವು ಏನನ್ನು ಕಲಿತು ಕೊಳ್ಳುವೆವು?

ಲಾಜರನಂತೆ ಕೆಲವರು ವಿಶ್ರಾಂತಿಯ ಸ್ಥಳಕ್ಕೆ ಹೋಗುವರು. ಇದು ಪರದೈಸ ಎಂದು ಕರೆಯಲ್ಪಡುವುದು, ಯಾಕಂದರೆ, ಯೇಸು ಕಳ್ಳನಿಗೆ ಹೇಳಿದ ಪ್ರಕಾರವಾಗಿ, ಆತನು ಮರಣ ಹೊಂದಿದಾಗ ಆತನು ಅಲ್ಲಿಗೆ ಹೋದನು (ಲೂಕ 23:43). ಆದರೆ ಪರದೈಸವು ಪಾತಾಳಲೋಕದ ಭಾಗವಾಗಿದ್ದಿರಬೇಕು. ಯಾಕಂದರೆ ಯೇಸುವು ಪಾತಾಳಕ್ಕೆ ಹೋದನೆಂದು ಬೈಬಲ್ ಬೋಧಿಸುತ್ತದೆ. ದಾವೀದನು, "ಮುಂದಾಗುವದನ್ನು ಕಂಡು ಕ್ರಿಸ್ತನ ಪುನರುತ್ಥಾನವನ್ನೇ ಕುರಿತು - ಆತನು ಪಾತಾಳ ಲೋಕದಲ್ಲಿ ಬಿಡಲ್ಪಡಲಿಲ್ಲವೆಂತಲೂ ಆತನ ಶರೀರವು ಕೊಳೆಯುವ ಅವಸ್ಥೆಯನ್ನು ಅನುಭವಿಸುವದಿಲ್ಲವೆಂತಲೂ ಹೇಳಿದನೆಂದು" (ಅಪೊಸ್ತಲರ ಕೃತ್ಯಗಳು 2:31) ಪೇತ್ರನು ನುಡಿದನು.

ಇತರರು ಐಶ್ವರ್ಯವಂತನಂತೆ ಯಾತನೆಯ ಸ್ಥಳಕ್ಕೆ ಹೋಗುವರು. ಐಶ್ವರ್ಯವಂತನೂ ಪಾತಾಳದೊಳಗೆ ಇದ್ದನೆಂದು ಹೇಳಲ್ಪಟ್ಟಿದೆ: "... ಆ ಐಶ್ವರ್ಯವಂತನು ಸತ್ತನು ... ಅವನು ಪಾತಾಳದೊಳಗೆ ಯಾತನೆ ಪಡುತ್ತಾ ಇರುವಲ್ಲಿ ಕಣ್ಣೆತ್ತಿ ... ನೋಡಿ ..." (ಲೂಕ 16:22, 23).

ಹೇಡೀಜ್‌ದಲ್ಲಿ ನೆಮ್ಮದಿಯ ಸ್ಥಳ ಮತ್ತು ವೇದನೆಯ ಸ್ಥಳ, ಎರಡೂ ಸ್ಥಳಗಳೂ ಹೇಗೆ ಇರಬಹುದು? ಪಾತಾಳವು ಸತ್ತವರ ಸ್ಥಳವಾಗಿದೆ, ನೀತಿವಂತರೂ ಅನೀತಿ ವಂತರೂ, ಸತ್ತವರೆಲ್ಲರೂ ಹೋಗುವ ಸ್ಥಳವಾಗಿದೆ. ಅದು ಎರಡು ಭಾಗಗಳನ್ನು ಒಳಗೊಂಡಿರುತ್ತದೆ: ನೆಮ್ಮದಿಯ ಸ್ಥಳ ಮತ್ತು ಯಾತನೆಯ ಸ್ಥಳ. 2 ಪೇತ್ರ 2:4ರಲ್ಲಿ ಪೇತ್ರನು *tartarus* ಎಂಬ ಗ್ರೀಕ್ ಪದವನ್ನು ಉಪಯೋಗಿಸಿದಾಗ ಯಾತನೆಯ ಪಾತಾಳದ ಸ್ಥಳದ ಬಗ್ಗೆ ಮಾತಾಡುತ್ತಿದ್ದಿರಬೇಕು. ಎಲ್ಲಾ ಯುಗಗಳ ದುಷ್ಟರು ತಮ್ಮ ದಂಡನೆಗಾಗಿ ಕಾದುಕೊಂಡಿದ್ದ ಸ್ಥಳವಿದೆಂಬುದಾಗಿ ಕಾಣುತ್ತದೆ.

ಹೇಡೀಜ್‌ದಲ್ಲಿ ಪರದೈಸಿನಲ್ಲಿ ಇರುವವರ ಮತ್ತು ಟಾರ್ಟರಸ್‌ದಲ್ಲಿರುವವರ ಮಧ್ಯದಲ್ಲಿ ಒಂದು ದೊಡ್ಡ ಡೊಂಗರವಿರುತ್ತದೆ. "ತನ್ನ ತುದಿಬೆರಳನ್ನು ನೀರಿನಲ್ಲಿ ಅದ್ದಿ ನನ್ನ ನಾಲಿಗೆಯನ್ನು ತಣ್ಣಗೆ ಮಾಡಲು" (ಲೂಕ 16:24) ಲಾಜರನು ಕಳುಹಿಸಲ್ಪಡ ಬೇಕು ಎಂದು ಐಶ್ವರ್ಯವಂತನು ಕೇಳಿಕೊಂಡನು, ಅಬ್ರಹಾಮನು ಕೊಟ್ಟ ಉತ್ತರದ ಭಾಗ ಹೀಗಿದೆ, "ಇದು ಮಾತ್ರವಲ್ಲದೆ ನಮಗೂ ನಿಮಗೂ ನಡುವೆ ದೊಡ್ಡದೊಂದು ಡೊಂಗರ ಸ್ಥಾಪಿಸಿದೆ; ಆದಕಾರಣ ಈ ಕಡೆಯಿಂದ ನಿಮ್ಮ ಬಳಿಗೆ ಹೋಗಬೇಕೆಂದಿರುವವರು ಹೋಗಲಾರರು; ಮತ್ತು ಆ ಕಡೆಯಿಂದ ನಮ್ಮ ಬಳಿಗೆ ಯಾರು ದಾಟುವದಕ್ಕಾಗದು" (ಲೂಕ 16:26). ಆ ಡೊಂಗರವನ್ನು ದಾಟುವದಕ್ಕಾಗುವದಿಲ್ಲ. ಒಬ್ಬನು ಒಂದು ಸಲ ಯಾತನೆ ಪಡುತ್ತಿರುವಾಗ ಅವನು ಅಲ್ಲಿಯೇ ಇರಬೇಕಾಗುತ್ತದೆ.

ಮರಣದ ನಂತರ ಕೂಡಲೇ ಜ್ಯೋ ಬ್ರೌನ್ ಎಲ್ಲಿಗೆ ಹೋಗುತ್ತಾನೆ? ಐಶ್ವರ್ಯವಂತ ಮತ್ತು ಲಾಜರ ಜೀವಿಸಿದ್ದರ ಮೇಲೆ ಅವಲಂಭಿಸಿದ್ದಂತೆ ಅದು ಅವನು ಜೀವಿಸಿದ್ದರ ಮೇಲೆ ಅವಲಂಭಿಸಿರುವುದು ಎಂಬುದು ಉತ್ತರವಾಗಿದೆ.

ಈ ಲೋಕದಲ್ಲಿಯ ಸುಖಕರವಾದ ಜೀವಿತವು ಬರುವ ಲೋಕದಲ್ಲಿ ಸುಖಕರ ವಾದ ಜೀವಿತಕ್ಕೆ ಭರವಸೆ ಕೊಡುವದಿಲ್ಲವೆಂಬುದನ್ನು ಲಾಜರನ ವೃತ್ತಾಂತವು ರುಜುವಾತು ಪಡಿಸುತ್ತದೆ. ಈಗ ನೀವು "ಪ್ರತಿದಿನವೂ ವೈಭವದೊಡನೆ ಸಂತೋಷಪಡುತ್ತಿರ ಬಹುದು"; ದೇವರ ಕಡೆಗಿರುವ ನಿಮ್ಮ ಜವಾಬ್ದಾರಿಕೆಯನ್ನು ಮರೆತುಬಿಟ್ಟಿರುವದರಿಂದ, ನೀವು ಕೂಡಲೇ ಮರಣಾನಂತರ, ಐಶ್ವರ್ಯವಂತನಂತೆ, ಭಯಂಕರವಾದ ಯಾತನೆಯಲ್ಲಿ ನಿಮ್ಮನ್ನು ಕಂಡುಕೊಳ್ಳಬಹುದು!

## ಜ್ಯೋ ಬ್ರೌನ್ ಕ್ರಿಸ್ತನ ಎರಡನೆಯ ಬರೋಣದಲ್ಲಿ

ನಾಲ್ಕನೆಯದಾಗಿ, ಕ್ರಿಸ್ತನ ಎರಡನೆಯ ಬರೋಣದಲ್ಲಿ ಜ್ಯೋ ಬ್ರೌನನನ್ನು ಯೋಚಿಸಿರಿ. ಯೇಸುವು ಪುನಃ ಬರುತ್ತಾನೆ! ಆತನ ದಿವಾರೋಹಣದ ನಂತರ ದೇವದೂತನು ಹೇಳಿದನು, "... ನಿಮ್ಮ ಬಳಿಯಿಂದ ಆಕಾಶದೊಳಕ್ಕೆ ಸೇರಿಸಲ್ಪಟ್ಟಿರುವ ಈ ಯೇಸು ಯಾವ ರೀತಿಯಲ್ಲಿ ಆಕಾಶದೊಳಕ್ಕೆ ಹೋಗಿರುವದನ್ನು ನೀವು ಕಂಡಿರೋ ಅದೇ ರೀತಿಯಲ್ಲಿ ಬರುವನು" (ಅಪೊಸ್ತಲರ ಕೃತ್ಯಗಳು 1:11). ಹೊಸ ಒಡಂಬಡಿಕೆಯ ಪ್ರಕಾರ ಯಾವುದೇ ಸಮಯದಲ್ಲಿ ಆತನ ಬರೋಣವನ್ನು ಯಾವುದೂ ತಡೆಗಟ್ಟಲಾರದು.

ಕ್ರಿಸ್ತನು ಹಿಂದಿರುಗಿ ಬರುವಾಗ ಏನು ಸಂಭವಿಸುವುದು?

*ಕ್ರಿಸ್ತನು ಪುನಃ ಬರುವಾಗ ಜ್ಯೋ ಬ್ರೌನ ಮತ್ತು ಎಲ್ಲಾ ಸತ್ತವರೂ ಎಬ್ಬಿಸಲ್ಪಡುವರು.* "... ಸಮಾಧಿಗಳಲ್ಲಿರುವವರೆಲ್ಲರು ಆತನ ಧ್ವನಿಯನ್ನು ಕೇಳಿ ಎದ್ದು ಹೊರಗೆ ಬರುವ ಕಾಲ ಬರುತ್ತದೆ. ಒಳ್ಳೇದನ್ನು ಮಾಡಿದವರಿಗೆ ಜೀವಕ್ಕಾಗಿ ಪುನರುತ್ಥಾನವಾಗುವದು; ಕೆಟ್ಟದ್ದನ್ನು ನಡಿಸಿದವರಿಗೆ ತೀರ್ಪಿಗಾಗಿ ಪುನರುತ್ಥಾನವಾಗುವದು" (ಯೋಹಾನ 5:28, 29) ಎಂದು ಯೇಸು ಹೇಳಿದನು. ನೀತಿವಂತರೂ ಅನೀತಿವಂತರೂ, ಎಲ್ಲರೂ ಒಂದೇ ಸಮಯದಲ್ಲಿ ಎಬ್ಬಿಸಲ್ಪಡುವರು.

*ಕ್ರಿಸ್ತನು ಪುನಃ ಬರುವಾಗ, ಜೀವದಿಂದ ಇರುವ ಎಲ್ಲರೂ ಮಾರ್ಪಡಿಸಲ್ಪಡುವರು.* "ಕೇಳಿರಿ, ಇದುವರೆಗೆ ಗುಪ್ತವಾಗಿದ್ದ ಸಂಗತಿಯನ್ನು ನಿಮಗೆ ತಿಳಿಸುತ್ತೇನೆ; ನಾವೆಲ್ಲರೂ ನಿದ್ರೆ ಹೋಗುವದಿಲ್ಲ; ಆದರೆ ಕಡೇ ತುತೂರಿಯ ಧ್ವನಿಯಾಗುವಾಗ ನಾವೆಲ್ಲರೂ ಒಂದೇ ಕ್ಷಣದಲ್ಲಿ ರೆಪ್ಪೆಬಡಿಯುವಷ್ಟರೊಳಗಾಗಿ ಮಾರ್ಪಡುವೆವು. ತುತೂರಿಯು ಊದಲಾಗಿ ಸತ್ತವರು ನಿರ್ಲಯರಾಗಿ ಎಬ್ಬಿಸಲ್ಪಡುವರು, ನಾವು ಮಾರ್ಪಡುವೆವು" (1 ಕೊರಿಂಥ 15:51, 52). ಪುನರುತ್ಥಾನದ ನಂತರ ಜ್ಯೋ ಬ್ರೌನನಿಗೆ ಇನ್ನೂ ಒಂದು ದೇಹವಿರುವುದು, ಆದರೆ ಅದು ಒಂದು ರೀತಿಯಲ್ಲಿ ಭಿನ್ನವಾದ ದೇಹವಾಗಿರುವುದು. ಅದು, ಇತರ ಸಂಗತಿಗಳೊಳಗೆ, ಲಯವಿಲ್ಲದ್ದೂ ಆತ್ಮಿಕವಾದದ್ದೂ ಆಗಿರುವುದು (1 ಕೊರಿಂಥ 15:42-44).

*ಕ್ರಿಸ್ತನು ಪುನಃ ಬರುವಾಗ, ಜಗತ್ತು ನಾಶಪಡಿಸಲ್ಪಡುವುದು.*

> ಆದರೂ ಕರ್ತನ ದಿನವು ಕಳ್ಳನು ಬರುವಂತೆ ಬರತ್ತದೆ. ಆ ದಿನದಲ್ಲಿ ಆಕಾಶಮಂಡಲವು ಮಹಾಘೋಷದಿಂದ ಇಲ್ಲದೆ ಹೋಗುವದು, ಸೂರ್ಯ ಚಂದ್ರ ನಕ್ಷತ್ರಗಳು ಉರಿದು ಲಯವಾಗಿ ಹೋಗುವವು, ಭೂಮಿಯೂ ಅದರಲ್ಲಿರುವ ಕೆಲಸಗಳೂ ಸುಟ್ಟು ಹೋಗುವವು (2 ಪೇತ್ರ 3:10).

ಲೋಕದಲ್ಲಿರುವ ಪ್ರತಿಯೊಂದೂ, ಲೋಕವು ತಾನೇ, ಲೋಕವನ್ನು ಒಳಗೊಂಡಿರುವ ವಿಶ್ವವೂ ಮತ್ತು ಜನರು ಯಾವುದಕ್ಕಾಗಿ ಜೀವಿಸುವರೋ ಆ ಎಲ್ಲಾ ಭೌತಿಕ ವಸ್ತುಗಳು ಕ್ರಿಸ್ತನು ಹಿಂದಿರುಗಿ ಬರುವಾಗ ಸುಟ್ಟು ಹೋಗುವವು! ಆಗ ನಾವು ಎಂಥಾ ರೀತಿಯ ಜನರಾಗಿರುತ್ತೇವೆ? (2 ಪೇತ್ರ 3:11). ನಿಶ್ಚಯವಾಗಿಯೂ, ಪ್ರಾಪಂಚಿಕ ಸಂಗತಿಗಳಿಗಾಗಿ ನಮ್ಮ ಜೀವಿತಗಳನ್ನು ಜೀವಿಸುವ ರೀತಿಯಲ್ಲಿ ನಾವಿರಬಾರದು!

## ಜ್ಯೋ ಬ್ರೌನ್ ನ್ಯಾಯತೀರ್ವಿಕೆಯಲ್ಲಿ

ಐದನೆಯದು, ನ್ಯಾಯತೀರ್ವಿಕೆಯಲ್ಲಿ ಜ್ಯೋ ಬ್ರೌನನ ಬಗ್ಗೆ ಯೋಚಿಸೋಣ.

ಕ್ರಿಸ್ತನು ಹಿಂದಿರುಗಿ ಬರುವಾಗ ಬೇರೆ ಇನ್ನೊಂದು ಸಂಗತಿಯು ಸಂಭವಿಸುವುದು. ಆ ಸಮಯದಲ್ಲಿ ಒಂದು ನ್ಯಾಯತೀರ್ವಿಕೆಯಿರುವುದು:

"ಇದಲ್ಲದೆ ಮನುಷ್ಯಕುಮಾರನು ತನ್ನ ಮಹಿಮೆಯಿಂದ ಎಲ್ಲಾ ದೇವದೂತರೊಂದಿಗೆ ಕೂಡಿಬರುವಾಗ ತನ್ನ ಮಹಮೆಯ ಸಿಂಹಾಸನದಲ್ಲಿ ಕೂತುಕೊಳ್ಳುವನು; ಮತ್ತು ಎಲ್ಲಾ ದೇಶಗಳ ಜನರು ಆತನ ಮುಂದೆ ಕೂಡಿಸಲ್ಪಡುವರು. ಕುರುಬನು ಆಡುಗಳನ್ನೂ ಕುರಿಗಳನ್ನೂ ಬೇರೆ ಬೇರೆ ಮಾಡುವ ಪ್ರಕಾರ ಆತನು ಅವರನ್ನು ಬೇರೆ ಬೇರೆ ಮಾಡಿ ಕುರಿಗಳನ್ನು ತನ್ನ ಬಲಗಡೆಯಲ್ಲಿ ಆಡುಗಳನ್ನು ಎಡಗಡೆಯಲ್ಲಿ ನಿಲ್ಲಿಸುವನು" (ಮತ್ತಾಯ 25:31, 32).

ನ್ಯಾಯತೀರ್ವಿಕೆಯ ಬಗ್ಗೆ ಹಲವಾರು ಪ್ರಶ್ನೆಗಳು ಉತ್ತರಿಸಲ್ಪಡಬೇಕಾಗಿದೆ:

ಯಾರು ನ್ಯಾಯತೀರಿಸಲ್ಪಡುವರು? ಪ್ರತಿಯೊಬ್ಬರು! "ಅವರಲ್ಲಿ ಪ್ರತಿಯೊಬ್ಬನಿಗೆ ಅವನವನ ಕೃತ್ಯಗಳ ಪ್ರಕಾರ ನ್ಯಾಯತೀರ್ಪಾಯಿತು" ಎಂದು ಯೋಹಾನನು ಹೇಳಿದನು (ಪ್ರಕಟನೆ 20:13; ಹೋಲಿಸು ರೋಮಾಪುರ 14:10-12). ಇಷ್ಟವಿರಲಿ ಅಥವಾ ಇಷ್ಟವಿಲ್ಲದಿರಲಿ, ಇಲ್ಲವೇ ಮೆಚ್ಚಿಕೊಳ್ಳದೇ ಇರ್ರಿ, ಸಿದ್ಧರಾಗಿರ್ರಿ ಇಲ್ಲವೇ ಸಿದ್ಧರಿಲ್ಲದೇ ಇರ್ರಿ. ನಾವೆಲ್ಲರೂ ನ್ಯಾಯತೀರ್ಪುಹೊಂದುವೆವು! ಈ ಸಂದರ್ಶನವನ್ನು ನಾವೆಲ್ಲರೂ ಕೈಕೊಳ್ಳಲೇಬೇಕು (ಇಬ್ರಿಯ 9:27).

ಯಾರು ನ್ಯಾಯಾಧೀಶರಾಗಿರುವರು? ದೇವರು "ನಿಷ್ಕರ್ಷೆಮಾಡಿದ ಪುರುಷನ ಕೈಯಿಂದ ನೀತಿಗನುಸಾರವಾಗಿ ಭೂಲೋಕದ ನ್ಯಾಯವಿಚಾರಣೆ ಮಾಡುವದಕ್ಕೆ ಒಂದು ದಿವಸವನ್ನು ಗೊತ್ತು ಮಾಡಿದ್ದಾನೆ. ಅವನನ್ನು ಸತ್ತವರೊಳಗಿಂದ ಎಬ್ಬಿಸಿದ್ದರಲ್ಲಿ ಇದನ್ನು ನಂಬುವದಕ್ಕೆ ಎಲ್ಲರಿಗೂ ಆಧಾರಕೊಟ್ಟಿದ್ದಾನೆ" (ಅಪೊಸ್ತಲರ ಕೃತ್ಯಗಳು 17:31).

ನ್ಯಾಯತೀರ್ವಿಕೆಯ ತಳಹದಿ ಯಾವುದಿರುವುದು? ಕ್ರಿಸ್ತನ ರಕ್ತದಲ್ಲಿ ನಾವು ತೊಳೆಯಲ್ಪಟ್ಟಿರುವೆವೋ ಎಂಬುದರ ಮೇಲೆ ನಾವು ರಕ್ಷಿಸಲ್ಪಡುವುದು ಇಲ್ಲವೇ ತಪ್ಪಿಹೋಗುವುದು ಅವಲಂಭಿಸಿರುತ್ತದೆ (ಪ್ರಕಟನೆ 7:14). ಇದಲ್ಲದೇ ಹೊಸ ಒಡಂಬಡಿಕೆಯು ನ್ಯಾಯತೀರ್ವಿಕೆಗಾಗಿ ಎರಡು ತಳಹದಿಗಳನ್ನು ಕುರಿತು ಮಾತಾಡುತ್ತದೆ. ಒಂದು, ನಾವು ಕ್ರಿಸ್ತನ ಮಾತುಗಳಿಂದ ನಾವು ನ್ಯಾಯತೀರ್ಪು ಹೊಂದುತ್ತೇವೆ. "... ನಾನು ಆಡಿದ ಮಾತು; ಅದೇ ಅವನಿಗೆ ಕಡೇ ದಿನದಲ್ಲಿ ತೀರ್ಪು ಮಾಡುವುದು" (ಯೋಹಾನ 12:48). ಎರಡನೆಯದು, ನಮ್ಮ ಕೃತ್ಯಗಳಿಂದ ನ್ಯಾಯತೀರ್ಪುಹೊಂದುತ್ತೇವೆ. "... ಪ್ರತಿಯೊಬ್ಬನು ತನ್ನ ದೇಹದ ಮೂಲಕ ನಡಿಸಿದ ಒಳ್ಳೇದಕ್ಕಾಗಲಿ ಕೆಟ್ಟದ್ದಕ್ಕಾಗಲಿ ಸರಿಯಾಗಿ ಪ್ರತಿಫಲವನ್ನು ಹೊಂದುವದಕ್ಕೋಸ್ಕರ ನಾವೆಲ್ಲರೂ ಕ್ರಿಸ್ತನ ನ್ಯಾಯಸ್ಥಾನದ ಮುಂದೆ ಯಥಾಸ್ಥಿತಿಯಲ್ಲಿ ಕಾಣಿಸಿಕೊಳ್ಳಬೇಕು" (2 ಕೊರಿಂಥ 5:10; ಹೋಲಿಸು ಪ್ರಕಟನೆ 20:12, 13; ಪ್ರಸಂಗಿ 12:14). ಇವೆರಡೂ ಹೇಗೆ ಒಂದುಗೂಡಿಸಲ್ಪಡಬಹುದು? ನಮ್ಮ ಕೃತಿಗಳಿಗನುಗುಣವಾಗಿ ಕ್ರಿಸ್ತನ ಮಾತುಗಳಿಂದ, ನಾವು ನಮ್ಮ ಕೃತಿಗಳಲ್ಲಿ ಆತನ ವಾಕ್ಯಗಳಿಗೆ ವಿಧೇಯರಾಗಿದ್ದದರಿಂದ, ನಾವು ನ್ಯಾಯತೀರ್ಪು ಹೊಂದುತ್ತೇವೆ.

ಹಾಗಾದರೆ ನ್ಯಾಯತೀರ್ವಿಕೆಯಲ್ಲಿ ಜ್ಯೋ ಬ್ರೌನನ ಮೇಲೆ ತೀರ್ಪು ಏನಾಗುವುದು? ಜ್ಯೋ ಬ್ರೌನ ತನ್ನಷ್ಟಕ್ಕೆ ಜೀವಿಸುವ ಪ್ರತಿದಿನ ನಿಜವಾಗಿಯೂ ತೀರ್ಪು ಬರೆಯಲ್ಪಡುತ್ತದೆ. ಜ್ಯೋ ಬ್ರೌನನು ಕ್ರಿಸ್ತನ ಚಿತ್ತಕ್ಕೆ ವಿಧೇಯನಾಗಿರಲಿ, ವಿಧೇಯನಾಗದೇ ಇರಲಿ, ನ್ಯಾಯತೀರ್ಪು ಹೊಂದುವದರಿಂದ, ಅವನು ಕರ್ತನಿಗೆ ವಿಧೇಯನಾಗಿರಲಿ, ವಿಧೇಯನಾಗದೇ ಇರಲಿ ನ್ಯಾಯತೀರ್ವಿಕೆಯಲ್ಲಿ ಅವನು ರಕ್ಷಿಸಲ್ಪಡುವನೋ ಇಲ್ಲವೇ ತಪ್ಪಿ ಹೋಗುವನೋ ಎಂಬುದನ್ನು ಅವನು ತೀರ್ಮಾನಿಸುವನು. ಹಾಗೆಯೇ ಅದು ನಿನ್ನ ಮತ್ತು ನನ್ನ ನ್ಯಾಯತೀರ್ವಿಕೆಯ ಬಗೆಗೂ ಇರುವುದು. ನಾವು ಅನುದಿನವೂ ಜೀವಿಸುವವರಂತೆ ನಾವು

ಕ್ರಿಸ್ತನಿಗೆ ವಿಧೇಯರಾಗುತ್ತಿರುವೆವೋ ಇಲ್ಲವೋ ಎಂಬುದರ ಮೇಲೆ ಅವಲಂಬಿಸಿ ನಾವು ಯಥಾರ್ಥರಾಗಿರುವವೋ ಇಲ್ಲವೇ ಅಪರಾಧಿಗಳಾಗಿರುವೆವೋ ಎಂಬುದನ್ನು ಈಗ ನಾವು ನಿರ್ಣಯಿಸುತ್ತಿರುವೆವು.

## ಜ್ಯೋ ಬ್ರೌನ್ ನಿತ್ಯತ್ವದಲ್ಲಿ

ಆರನೆಯದಾಗಿ, ನಿತ್ಯತ್ವದಲ್ಲಿ ಜ್ಯೋ ಬ್ರೌನನನ್ನು ಕುರಿತು ಯೋಚಿಸಿರಿ.

ಜ್ಯೋ ಬ್ರೌನನಿಗೆ ಯಾವ ನಿತ್ಯವಾದ ಸಾಧ್ಯತೆಗಳಿರುವವು? ಮತ್ತಾಯ 25:46 ಹೀಗೆ ಹೇಳುತ್ತದೆ, "ಇವರು ನಿತ್ಯಶಿಕ್ಷೆಗೂ ನೀತಿವಂತರು ನಿತ್ಯಜೀವಕ್ಕೂ ಹೋಗುವರು."

ಜ್ಯೋ ಬ್ರೌನನಿಗೆ ಮತ್ತು ಉಳಿದ ನಮಗೆ, ಕೇವಲ ಎರಡು ಸಾಧ್ಯತೆಗಳು ಇರುವವು: ನಿತ್ಯವಾದ ದಂಡನೆ, ನರಕ; ಇಲ್ಲವೇ ನಿತ್ಯಜೀವ, ಪರಲೋಕ ಮತ್ತಾಯ 25:46 ರಲ್ಲಿ ಎರಡೂ ಸಮಾಂತರವಾಗಿವೆ ಎಂಬುದನ್ನು ಗಮನಿಸಿರಿ; ಒಂದು ಇನ್ನೊಂದರಂತೆ ನಿಜವಾದದ್ದಾಗಿರುವುದು ಮತ್ತು ಧೀರ್ಘವಾದದ್ದಾಗಿರುವುದು. ಪರಲೋಕವು ಇದ್ದರೆ ಮತ್ತು ಪರಲೋಕವು ನಿತ್ಯವಾಗಿ ಇರುವುದಾದರೆ, ಆಗ ನರಕವೂ ಇರುವುದು ಮತ್ತು ನರಕವು ನಿತ್ಯವಾಗಿರುವುದು.

ನಿಜವಾಗಿಯೂ ಪರಲೋಕವು ಇರುವುದೋ? 1969ರಲ್ಲಿ *ಸಿಡ್ನಿ ಮೋರ್ನಿಂಗ್ ಹೆರಾಲ್ಡ್* "ಪರಲೋಕವಿರುವುದೋ?" ಎಂಬ ಶಿರೋನಾಮದೊಂದಿಗೆ ಒಂದು ಲೇಖನವನ್ನು ಪ್ರಕಟಿಸಿತು. ಪರಲೋಕದ ಬಗ್ಗೆ ಅನೇಕ ಜನರ ದೃಷ್ಟಿಕೋನಗಳನ್ನು ಕೊಟ್ಟು "quick earthly surveyದ" ಪರಿಣಾಮಗಳನ್ನು ಅದು ಉಲ್ಲೇಖಿಸಿತ್ತು.

> ... ಒಬ್ಬ ಮಾನವತಾವಾದಿ ಹೀಗೆ ಹೇಳಿದನು, "ಪರಲೋಕ ಮತ್ತು ನರಕದ ವಿಚಾರವನ್ನು ನಾವು ತಿರಸ್ಕರಿಸುತ್ತೇವೆ. ಅನಂತರದ್ದನ್ನು ನಾವು ಸೈತಾನನ ತತ್ವವೆಂದು ಯೋಚಿಸುತ್ತೇವೆ." ... ಒಬ್ಬ ರಬ್ಬಿಯು ಪರಲೋಕವು ಆತ್ಮಿಕ ವಿಚಾರವಾಗಿದೆಯೆಂದು ಹೇಳಿದನು. ಒಬ್ಬ ಶಿಲ್ಪಿಯು ಒಂದು ದಿನ ಅವಿಸ್ಮರಣೆಯೊಳಗೆ ತೇಲಿ ಹೋಗುವನು ಎಂದು ಯೋಚಿಸುವಲ್ಲಿ ತೃಪ್ತನಾಗಿರುವನು. ಆದರೆ ನಿಶ್ಚಿತವಾದದ್ದರ ಕಡೆಗೆ ಚಲಿಸುತ್ತಿರುವೆನೆಂದು ನಿರೀಕ್ಷಿಸುತ್ತಿರುವನು, ... ಮತ್ತು Unidentified Flying Object Investigation Centreದ ಅಧ್ಯಕ್ಷನು ಪರಲೋಕ ಮತ್ತು ಭೂಲೋಕಗಳು ಮನುಷ್ಯನ ಕಲ್ಪನೆಯಿಂದ ಸೃಷ್ಟಿಸಲ್ಪಟ್ಟವೆಂದು ಗಮನಿಸಿದನು. ಆದರೆ ಅಂತರಿಕ್ಷವು ಹೆಚ್ಚು ಪ್ರಗತಿಯುಳ್ಳ ನಾಗರಿಕತೆಯೊಂದಿಗೆ ಹೆಚ್ಚು ಉತ್ತಮ ಜಗತ್ತನ್ನು ಒಳಗೊಂಡಿದೆ.

ಜನರು ಏನೇ ವಿಚಾರ ಮಾಡಿದರೂ, ಪರಲೋಕವಿದೆ ಮತ್ತು ಅದು ಗಣಿಸಲ್ಪಡುತ್ತದೆ ಎಂದು ಬೈಬಲ್ ಬೋಧಿಸುತ್ತದೆ.

ನಿಜವಾಗಿಯೂ ಒಂದು ನರಕವಿರುವುದೋ? ನರಕವು ನಿತ್ಯದಂಡನೆಯಾಗಿದೆ ಎಂಬ ದೃಷ್ಟಿಕೋನವನ್ನು ಆಕ್ಷೇಪಿಸುತ್ತಾರೆ. ನರಕವು ಕೇವಲ ಒಂದು ಕ್ಷಣದ ವಿಷಯವಾಗಿದ್ದು, ಅದು ನಿತ್ಯವಾಗಿ ಇರುವದಿಲ್ಲ ಎಂದು ಹೇಳುತ್ತಾರೆ. ಅವರ ಪ್ರಕಾರವಾಗಿ ದುಷ್ಟರಾಗಿರುವವರು ಸುಮ್ಮನೇ ವಿನಾಶವಾಗಿ ಹೋಗುವರು - ಅವರು ಅಸ್ತಿತ್ವದಲ್ಲಿರುವುದು ನಿಂತುಹೋಗುವುದು. ಆದರೆ ದುಷ್ಟರು ಅಸ್ತಿತ್ವದಲ್ಲಿರುವುದು ಮುಗಿದು ಹೋಗುವದೆಂದು ಬೈಬಲ್ ಬೋಧಿಸುವದಿಲ್ಲ. ಅವರು ನಿತ್ಯವಾಗಿ ಶ್ರಮೆ ತಾಳುವರು ಎಂದು ಅದು ಬೋಧಿಸುತ್ತದೆ. "ಅಂಥವರ ಯಾತನೆಯ ಹೊಗೆಯು

ಯುಗಾಂತರಗಳಲ್ಲಿಯೂ ಏರುತ್ತಾ ಹೋಗುತ್ತದೆ; ... ಹಗಲಿರುಳು ಉಪಶಮನವಿಲ್ಲದೆ ಯಾತನೆ ಪಡುವರು" ಎಂದು ಪ್ರಕಟನೆ 14:11 ಹೇಳುತ್ತದೆ.

"ಅದು ಬಹಳವಾಗಿ ಕ್ರೂರವಾದದ್ದು" ಎಂದು ಕೆಲವರು ಆಕ್ಷೇಪಿಸುತ್ತಾರೆ. "ಜನರು ಇತರ ಜನರನ್ನು ಯಾತನೆ ಪಡಿಸುವದಿಲ್ಲ. ನಿಶ್ಚಯವಾಗಿಯೂ ತನ್ನನ್ನು ಮತ್ತು ತನ್ನ ವಾಕ್ಯವನ್ನು ತಿರಸ್ಕರಿಸುವವರನ್ನು ದೇವರು ಯಾತನೆಪಡಿಸುವದಿಲ್ಲ." ಪುನಃ ಯೋಚಿಸಿರಿ: ದುಷ್ಟ ಜನರನ್ನು ದೇವರು ಯಾಕೆ ಶಿಕ್ಷಿಸಬಾರದು? ಅವರು ಒಳ್ಳೆ ದೇವರಿಗೆ ವಿರುದ್ಧವಾಗಿ ಪಾಪ ಮಾಡಿದರು. ಅವರು ಅವರ ಪರವಾಗಿ ಅರ್ಪಿಸಿದ ಯಜ್ಞವನ್ನು ತಿರಸ್ಕರಿಸಿದರು. ಅವರು ದಂಗೆಯ ಜೀವಿತಗಳನ್ನು ಜೀವಿಸಿದರು. ರಕ್ಷಿಸಲ್ಪಡುವ ಪ್ರತಿಯೊಂದು ಅವಕಾಶವನ್ನು ತಿರಸ್ಕರಿಸಿದರು. ಅವರು ಮಿತಿಯಿಲ್ಲದ ಪಾಪವನ್ನು ಮಿತಿಯಿಲ್ಲದ ದೇವರಿಗೆ ವಿರುದ್ಧವಾಗಿ ಪಾಪವನ್ನು ಮಾಡಿದರು ಮತ್ತು ಹೀಗೆ ಅವರು ಮಿತಿಯಿಲ್ಲದ ಶಿಕ್ಷೆಯನ್ನು ಹೊಂದಲು ಅರ್ಹರಾಗಿದ್ದಾರೆ.

ನರಕವು ಹೇಗಿರುವುದು? ಇತರ ಸಂಗತಿಗಳಲ್ಲಿ ನರಕವನ್ನು, ಬೆಂಕಿಯ ಕೆರೆಯಂತೆ (ಪ್ರಕಟನೆ 20:15), ಬೆಂಕಿಯ ಕೊಲಿಮೆ ಇಲ್ಲವೇ ಗೋಳಾಟಸ್ಥಳದಂತೆ (ಮತ್ತಾಯ 13:42), ವೇದನೆಯ ಸ್ಥಳದಂತೆ (ಲೂಕ 16:23), ಹೊರಗಿನ ಕತ್ತಲೆಯ ಸ್ಥಳದಂತೆ (ಮತ್ತಾಯ 8:12), ಜನರು ಕರುಣೆಗಾಗಿ ಕೂಗುವ ಸ್ಥಳದದಂತೆ (ಲೂಕ 16:24), ನಿತ್ಯವಾದ ಶಿಕ್ಷೆಯ ಸ್ಥಳದಂತೆ (ಮತ್ತಾಯ 25:46), ಸೈತಾನನಿಗೂ ಅವನ ದೂತರಿಗೂ ಸಿದ್ಧಪಡಿಸಲ್ಪಟ್ಟ ಸ್ಥಳದಂತೆ (ಮತ್ತಾಯ 25:41) ಮತ್ತು ಬೆಂಕಿ ಗಂಧಕಗಳಿಂದ ವೇದನೆ ಪಡಿಸುತ್ತಿರುವ ಒಂದು ಸ್ಥಳದಂತೆ (ಪ್ರಕಟನೆ 21:8) ಹೊಸ ಒಡಂಬಡಿಕೆಯ ವಿವರಿಸುತ್ತದೆ.

ನಿತ್ಯತ್ವದಲ್ಲೆಲ್ಲಾ ಜ್ಯೋ ಬ್ರೌನನು ಎಲ್ಲಿ ಇರುವನು? ಸ್ಪಷ್ಟವಾಗಿ ಪರಲೇಕದಲ್ಲಿ ಅಥವಾ ನರಕದಲ್ಲಿ ಅವನು ಒಂದರಲ್ಲಿ ಇಲ್ಲವೇ ಇನ್ನೊಂದರಲ್ಲಿ ಇರುವುದು ಅವನ ಮೇಲೆ ಅವಲಂಭಿಸಿರುತ್ತದೆ. ಕ್ರಿಸ್ತನ ಸುವಾರ್ತೆಗೆ ವಿಧೇಯರಾಗುವದರಿಂದ, ಅವನು ಕ್ರಿಸ್ತನ ರಕ್ತದ ಮುಖಾಂತರ ರಕ್ಷಣೆಯನ್ನು ಸ್ವೀಕರಿಸಿದರೆ, ಮತ್ತು ಆಗ ದೇವರ ಚಿತ್ತವನ್ನು ಮಾಡುವದರಲ್ಲಿ ತನ್ನ ಜೀವನವನ್ನು ಹುಡುಕುವದರಲ್ಲಿ ಕಳೆದರೆ, ನಿತ್ಯವಾಗಿ ಪರಲೋಕದಲ್ಲಿ ಇರುವ ನಿಶ್ಚಿತತೆ ಹೊಂದುವನು. ಆದರೆ ಅವನು ಪಾಪದಲ್ಲಿ ಜೀವಿಸಿದ್ದರೆ ಮತ್ತು ತನಗಾಗಿ ಜೀವಿಸಿದರೆ, ಅವನು ತಪ್ಪಿಹೋಗುವ ಮತ್ತು ಸದಾಕಾಲ ನರಕದಲ್ಲಿರುವ ನಿಶ್ಚಿತತೆ ಪಡೆದು ಕೊಳ್ಳುವನು.

## ಮುಕ್ತಾಯ

ನೀವು ಕೇಳಲ್ಪಟ್ಟ ಇನ್ನೊಂದು ಅತೀ ಪ್ರಾಮುಖ್ಯವಾದ ಪ್ರಶ್ನೆಯು: *ನಿತ್ಯತ್ವದಲ್ಲೆಲ್ಲಾ ನೀವು ಎಲ್ಲಿರುವಿರಿ?* ಕೇವಲ ಎರಡು ಸಾಧ್ಯತೆಗಳು ಅಸ್ತಿತ್ವದಲ್ಲಿವೆ. ಪರಲೋಕ ಇಲ್ಲವೇ ನರಕ. ಮೂರನೆಯ ಪರ್ಯಾಯ ಇರುವದಿಲ್ಲ. ಅದನ್ನು ದಾಟಿ, ಜ್ಯೋ ಬ್ರೌನ ಅವನ ಬಗ್ಗೆ ನಾವು ಹೇಳಿದ್ದನ್ನು ನಿಮ್ಮ ಅಂತಿಮ ಗಮ್ಯಸ್ಥಾನದ ಬಗ್ಗೆ ಹೇಳಬಹುದು. ಅದು ನಿಮ್ಮ ಮೇಲೆ ಅವಲಂಭಿಸಿರುತ್ತದೆ. ನೀವು, ಇಲ್ಲಿ ಮತ್ತು ಈಗ, ಅದೇನಾಗಿರುವದೆಂಬುದನ್ನು ತೀರ್ಮಾನಿಸುತ್ತಿರುವಿರಿ.

ಸುವಾರ್ತೆಗೆ ವಿಧೇಯರಾಗುವದರಿಂದ ಕ್ರಿಸ್ತನ ರಕ್ತದಿಂದ ನೀವು ರಕ್ಷಿಸಲ್ಪಟ್ಟರೆ ಮತ್ತು ಆಗ ಆತನ ಚಿತ್ತವನ್ನು ಮಾಡಲು ಹುಡುಕುತ್ತ ನಿಮ್ಮ ಜೀವಿತವನ್ನು ಕಳೆದರೆ, ನೀವು ನಿತ್ಯವಾಗಿ ಪರಲೋಕದಲ್ಲಿ ಇರುವದನ್ನು ನಿಶ್ಚಿತಪಡಿಸಿಕೊಳ್ಳಬಹುದು. ಆದರೆ ನೀವು ಪಾಪದಲ್ಲಿ ಜೀವಿಸಿದ್ದರೆ, ನೀವು ತಪ್ಪಿಹೋಗುವ ಮತ್ತು ಸದಾಕಾಲವೂ

ನರಕದಲ್ಲಿರುವದರ ನಿಶ್ಚಿತತೆಯುಳ್ಳವರಾಗಿರುವಿರಿ. ನೀವು ಪರಲೋಕಕ್ಕೆ ಹೋಗಬಹುದೋ ಇಲ್ಲವೇ ನರಕಕ್ಕೆ ಹೋಗಬಹುದೋ ಎಂಬುದು ಒಟ್ಟಾಗಿ ನಿಮಗೆ ಬಿಡಲ್ಪಟ್ಟಿದೆ!

ಒಂದು ರಾತ್ರಿ ಕನಸಿನಲ್ಲಿ, ಚಳಿಗಾಲದ ಮಧ್ಯದಲ್ಲಿ ಒಂದು ಅಡವಿಯಲ್ಲಿ ಏಕಾಂತವಾದ ದಾರಿಯಲ್ಲಿ ವಾಹನದಲ್ಲಿ ನಾನು ಪ್ರಯಾಣ ಮಾಡುತ್ತಿದ್ದೆನು. ದಾರಿಯಲ್ಲಿ ಒಂದು ತಿರುವಿಗೆ ಬಂದು, ಎಡಗಡೆಗೆ ಹೊರಳಿದೆನು, ಮತ್ತು ಮುಂದುವರೆದೆನು. ದಾರಿಯು ಇಕ್ಕಟ್ಟಾಗುತ್ತ, ಒರಟಾದದ್ದಾಗುತ್ತ ಬಂದಿತು, ಅಂತಿಮವಾಗಿ ಸಂಪೂರ್ಣವಾಗಿ ಇಲ್ಲದಂತೆ ತೋರಿತು. ನಾನು ಪುನಃ ಹಿಂದಿರುಗಿಸಿ ದಾರಿಯಲ್ಲಿಯ ತಿರಿವಿನ ಬಳಿಗೆ ಬಂದದ್ದನ್ನು ಕನಸು ಕಂಡೆನು ನಿಶ್ಚಯವಾಗಿಯೂ, *ನಾನು ಎಲ್ಲಿ ಇದ್ದೆನು ಮತ್ತು ಎಲ್ಲಿಗೆ ಹೊಗುತ್ತಿದ್ದೆನು ಎಂಬುದನ್ನು ತಿಳಿದಿರಲಿಲ್ಲ.* ಸಂಪೂರ್ಣವಾಗಿ ನಾನು ನಾಶಪಡಿಸಲ್ಪಟ್ಟವನಂತೆ ಭಾವಿಸಿದೆನು. ಅದು ಭಯಂಕರವಾದ ಅನಿಸುವಿಕೆಯಾಗಿತ್ತು ಮತ್ತು ಭಯಪಡಿಸುವ ಅನುಭವವಾಗಿತ್ತು. ಅದು ನನ್ನನ್ನು ಎಚ್ಚಿಸಿತು, ಮತ್ತು ಕನಸು ನನ್ನೊಂದಿಗೆ ಉಳಿದುಕೊಂಡಿತು.

ಅನೇಕರು ಇಲ್ಲಿಯದರ ಬಗ್ಗೆಯೇ ಬಹಳವಾಗಿ ತುಂಬಿಕೊಂಡವರಾಗಿದ್ದು, ಮುಂದಿನದರ ಬಗ್ಗೆ ವಿಚಾರಿಸುವುದೇ ಇಲ್ಲ. ಅವರು ಈ ಜೀವನದ ಬಗ್ಗೆ ಬಹಳವಾಗಿ ಯೋಚಿಸುವರು, ಅದರಿಂದ ಇದರ *ನಂತರದ ಜೀವನದ ಬಗ್ಗೆ* ವಿಚಾರವಿಲ್ಲದವರಾಗಿರುವರು. *ಸಮಯದ* ಮೇಲೆ ಅವರು ಬಹಳವಾಗಿ ಕೇಂದ್ರೀಕರಿಸುವರು, ಅದರಿಂದ ನಿತ್ಯತ್ವದ ಬಗ್ಗೆ ಯೋಚನೆಯಿಲ್ಲದವರಾಗಿರುವರು. *ಒಂದು ದೃಶ್ಯದಲ್ಲಿ ಅವರು ಎಲ್ಲಿ ಇರುವರು ಮತ್ತು ಎಲ್ಲಿಗೆ ಹೋಗುತ್ತಿರುವರು ಎಂಬುದನ್ನು ನಿಜವಾಗಿಯೂ ತಿಳಿದಿರುವದಿಲ್ಲ.*

ಅದು ನಿನ್ನ ವಿಷಯದಲ್ಲಿ ಸತ್ಯವಾಗಿದ್ದರೆ, ನೀನು ಇಂದು ಮಾಡುತ್ತಿರುವದರ ನಿತ್ಯವಾದ ಪರಿಣಾಮಗಳ ಬಗ್ಗೆ ಜಾಗರೂಕತೆಯಿಂದ ವಿಚಾರಿಸು. ನೀನು ಪರಲೋಕಕ್ಕೆ ಹೋಗುತ್ತಿರುವಿ ಎಂಬುದನ್ನು ತಿಳಿಯುವ ರೀತಿಯಲ್ಲಿ ಜೀವಿಸುವದನ್ನು ನಿಶ್ಚಿತಪಡಿಸಿಕೋ!

---

ಟಿಪ್ಪಣಿ

[1]*Complete Lectures of R. G. Ingersoll* (Chicago: J. Regan & Co., n.d.), 60.

© 2009 Truth for Today